ಕ್ರಿಮಿನಲ್.ಮಿಸ್ಲೇನಿಯಸ್ ನಂ.1256/2021
ಪಿ.ಡಬ್ಲ್ಯೂ–1

**ಸಾಕ್ಷಿಯನ್ನು ಇಂದು ದಿನಾಂಕಃ 09.10.2025 ರಂದು ಕರೆದು ಪ್ರಮಾಣಿಕರಿಸಲಾಯಿತು**

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

ನಾನು ಡಿ.ಎಡ್.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪದವಿ ಅಂತಿಮ ವರ್ಷದ ಒಂದು ವಿಷಯ ಉಳಿದಿರುತ್ತದೆ. ಎದುರುದಾರ 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ಎದುರುದಾರ ನಿಮ್ಮನ್ನು ಕರೆದುಕೊಂಡು ಹೋಗಲು ತಯಾರು ಇದ್ದು ನೀವು ಅವರ ಜೊತೆಗೆ ಜೀವನ ನಡೆಸಲು ಹೋಗುತ್ತೀರಾ ಎಂದರೆ ಸಾಕ್ಷಿಯು ನನಗೆ ನಂಬಿಕೆ ವಿಶ್ವಾಸ ಉಳಿದಿಲ್ಲ ಅಂತಾ ನುಡಿಯುತ್ತಾರೆ. ನಾನು ಮತ್ತು ಎದುರುದಾರ ಇಬ್ಬರು ಸವಳೇಶ್ವರ ಗ್ರಾಮದವರು ಎಂದರೆ ಸರಿ. 5 ವರ್ಷಗಳಿಂದ ಎದುರುದಾರರ ತಂದೆ ತಾಯಿ ತಡಕಲ್ ಗ್ರಾಮದಲ್ಲಿ ಇರುತ್ತಾರೆ. ಎದುರುದಾರ ಈಗ ನಿಮಗೆ ಆಳಂದದಲ್ಲಿ ಪ್ರತ್ಯೇಕ ಮನೆ ಮಾಡಿ ಕರೆದುಕೊಂಡು ತಯಾರು ಇರುತ್ತಾರೆ ಎಂದರೆ ಸಾಕ್ಷಿಯು ಈ ಮೊದಲು ಸಹ ಸವಳೇಶ್ವರ ಮತ್ತು ತಡಕಲ್‌ದಲ್ಲಿ ನನಗೆ ಮನೆ ಮಾಡಿ ಇಟ್ಟಿದ್ದರು. ಮೊದಲು ಒಂದೆರಡುತಿಂಗಳು ಚೆನ್ನಾಗಿ ನೋಡಿಕೊಂಡು ನಂತರ ನನಗೆ ಕುಡಿದು ಬಂದು ಹೊಡೆ ಬಡೆ ಮಾಡುತ್ತಿದ್ದರು, ಆದ ಕಾರಣ ನನ್ನ ಅಕ್ಕ ಮತ್ತು ಬಾವ ನನ್ನನ್ನು ಪುನಾಕ್ಕೆ ಕರೆದುಕೊಂಡು ಹೋಗಿರುತ್ತಾರೆ, ಈಗ ನನಗೆ ಎದುರುದಾರ ಮೇಲೆ ನಂಬಿಕೆ ವಿಶ್ವಾಸ ಇರುವುದಿಲ್ಲ ಅಂತಾ ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದರಿಂದ ನೀಡಲಾಯಿತು.

ಓ.ಹೇ.ಕೆ.ಸರಿ.ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಆಳಂದ.